**ಓ.ಎಸ್. ನಂಃ 60/2021**

**ಪಿ.ಡಬ್ಲ್ಯೂಃ 1**

**ದಿನಾಂಕ 25.02.2026 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ.ಟಿ.ಜಿ.ಆರ್. ವಕೀಲರಿಂದಃ**

1. ನಾನು ಬ್ಯಾಡರಹಳ್ಳಿ ಗ್ರಾಮದ ನಿವಾಸಿ ಎಂದರೆ ಸರಿ. ನಾನು ಮತ್ತು ಪ್ರತಿವಾದಿ ಒಂದೇ ಗ್ರಾಮಸ್ಥರು ಎಂದರೆ ಸರಿ. ನಾನು ವೃತ್ತಿಯಲ್ಲಿ ವ್ಯವಸಾಯಗಾರನಾಗಿರುತ್ತೇನೆ. ಈ ಹಿಂದೆ ನಾನು ಕೆ.ಎಸ್.ಆರ್.ಟಿ.ಸಿ ಯಲ್ಲಿ ನಿರ್ವಾಹಕನಾಗಿ ಕೆಲಸವನ್ನು ಮಾಡುತ್ತಿದ್ದೆ ಎಂದರೆ ಸರಿ. ನಾನು ಸ್ವತಃ ನನ್ನ ಕೆಲಸದಿಂದ ನಿವೃತ್ತಿಯನ್ನು ಪಡೆದಿರುತ್ತೇನೆ ಎಂದರೆ ಸರಿ.

2. ದಾವಾ ಆಸ್ತಿಯು ಮೂಲತಃ ಪ್ರತಿವಾದಿಗೆ ಸೇರಿದ ಆಸ್ತಿ ಆಗಿತ್ತು ಎಂದರೆ ಸರಿ. ಸಾಕ್ಷಿಯು ಮುಂದುವರೆದು ದಾವಾ ಆಸ್ತಿಯನ್ನು ಪ್ರತಿವಾದಿಯಿಂದ ಶಿವಣ್ಣರವರು ಖರೀದಿಸಿದ್ದು, ನಂತರದಲ್ಲಿ ದಾವಾ ಆಸ್ತಿಯನ್ನು ಸದರಿ ಶಿವಣ್ಣರವರು ನನಗೆ ಮಾರಾಟ ಮಾಡಿರುತ್ತಾರೆ ಎಂದು ಸ್ವತಃ ನುಡಿದಿರುತ್ತಾರೆ. ದಾವಾ ಆಸ್ತಿಯನ್ನು ಮೂಲತಃ ದೊಡ್ಡೇಗೌಡರ ಮಗ ಮಹದೇವಪ್ಪ ಎನ್ನುವವರಿಂದ ಪ್ರತಿವಾದಿಯು ಖರೀದಿಸಿದ್ದರು ಎಂದರೆ ಸರಿ. ನಂತರದಲ್ಲಿ ದಾವಾ ಆಸ್ತಿಯ ಸ್ವಾಧೀನವನ್ನು ಪ್ರತಿವಾದಿಯೇ ತಮ್ಮಲ್ಲಿ ಇರಿಸಿಕೊಂಡು ದಾವಾ ಆಸ್ತಿಯನ್ನು ಕೇವಲ ನಾಮ ಮಾತ್ರಕ್ಕೆ ಶಿವಣ್ಣರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ.

3. ಸದರಿ ಶಿವಣ್ಣರವರ ಊರಿನಿಂದ ದಾವಾ ಆಸ್ತಿಗೆ ಬರಲು 35 ಕಿ.ಲೋ.ಮೀಟರ್ ನ ಅಂತರವಿದೆ ಎಂದರೆ ಸರಿ. ಆದ್ದರಿಂದ ಸದರಿ ಶಿವಣ್ಣರವರು ಎಂದಿಗೂ ಸಹ ದಾವಾ ಆಸ್ತಿಯನ್ನು ಉಳುಮೆ ಮಾಡಿರಲಿಲ್ಲ ಬದಲಾಗಿ ಪ್ರತಿವಾದಿಯೇ ದಾವಾ ಆಸ್ತಿಯನ್ನು ಉಳುಮೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮಗಳಾದ ಪುಷ್ಪಲತಾಳನ್ನು ಪ್ರತಿವಾದಿಯ ತಮ್ಮನಾದ ಕಾಂತರಾಜುರವರೊಂದಿಗೆ ವಿವಾಹ ಮಾಡಿಕೊಟ್ಟಿರುತ್ತೇನೆ ಎಂದರೆ ಸರಿ. ನಮ್ಮ ಮತ್ತು ಪ್ರತಿವಾದಿಯ ಮಧ್ಯೆ ಕೌಟುಂಬಿಕ ಕಲಹವಿದೆ ಎಂದರೆ ಸರಿಯಲ್ಲ.

4. ದಾವಾ ಆಸ್ತಿಯನ್ನು ನನಗೆ ಮಾರಾಟ ಮಾಡುವ ಪೂರ್ವದಲ್ಲಿಯೇ ಮಾರಾಟಗಾರರಾದ ಶಿವಣ್ಣ ಬಿನ್ ಚಿಕ್ಕೇಗೌಡ, ಅವರ ಹೆಂಡತಿಯಾದ ಸುಂದರಮ್ಮ

ಹಾಗೂ ಮಗನಾದ ಚೇತನರವರು ದಾವಾ ಆಸ್ತಿಯನ್ನು ಪ್ರತಿವಾದಿಯ ಪತ್ನಿಯಾದ ಶೈಲಜಾರವರಿಗೆ ಮಾರಾಟ ಮಾಡುವುದಾಗಿ ಒಪ್ಪಿ ದಿನಾಂಕ 07.06.2016 ರಂದು ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನು ದಾವಾ ಆಸ್ತಿಯನ್ನು ಖರೀದಿಸಿದ ನಂತರದಲ್ಲಿ ಅಂತಹ ದಾಖಲೆಯನ್ನು ಸೃಷ್ಟಿಸಿರುತ್ತಾರೆ ಎಂದು ಸಾಕ್ಷಿಯು ಸ್ವತಃ ನುಡಿದಿರುತ್ತಾರೆ. ದಿನಾಂಕ 07.06.2016 ರ ಕ್ರಯದ ಕರಾರು ಪತ್ರವನ್ನು ಗ್ರಾಮಸ್ಥರ ಸಮಕ್ಷಮದಲ್ಲಿ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

5. ದಿನಾಂಕ 07.06.2016 ರ ಕ್ರಯದ ಕರಾರು ಪತ್ರದ ಪ್ರಕಾರ ದಾವಾ ಆಸ್ತಿಯನ್ನು ಪ್ರತಿವಾದಿಯ ಪತ್ನಿಯಾದ ಶೈಲಜಾರವರಿಗೆ ಮಾರಾಟ ಮಾಡದ ಕಾರಣ ಸದರಿ ಶೈಲಜಾರವರು ದಾವಾ ಆಸ್ತಿಯ ಮಾರಾಟಗಾರರಾದ ಶಿವಣ್ಣ ಬಿನ್ ಚಿಕ್ಕೇಗೌಡರಿಗೆ ಕಾನೂನು ತಿಳುವಳಿಕೆ ನೋಟಿಸನ್ನು ಕಳುಹಿಸಿದ ವಿಷಯ ನಿಮಗೆ ಗೊತ್ತಿತ್ತು ಎಂದರೆ ಸಾಕ್ಷಿಯು ನನಗೆ ಅದರ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿದಿರುತ್ತಾರೆ.

6. ದಿನಾಂಕ 09.04.2018 ರಂದು ನಾನು ದಾವಾ ಆಸ್ತಿಯನ್ನು ಖರೀದಿಸಿರುತ್ತೇನೆ. ನಿಪಿ.1 ರ ಕ್ರಯ ಪತ್ರಕ್ಕೆ ಕಿರಣ್ ಕುಮಾರ್ ಮತ್ತು ಮಹದೇವರವರು ಸಾಕ್ಷಿದಾರರಾಗಿ ತಮ್ಮ ಸಹಿಗಳನ್ನು ಮಾಡಿರುತ್ತಾರೆ. ನಿಪಿ.1 ರ ಸಾಕ್ಷಿದಾರನಾದ ಕಿರಣ್ ನನ್ನ ಮಗ ಹಾಗೂ ಇನ್ನೊಬ್ಬ ಸಾಕ್ಷಿದಾರನಾದ ಮಹದೇವ ನನ್ನ ಅಣ್ಣನ ಮಗ.

7. ನಿಪಿ.1 ರ ಕ್ರಯ ಪತ್ರ ಆಗುವ 2-3 ದಿನಗಳ ಪೂರ್ವದಲ್ಲಿ ದಾವಾ ಆಸ್ತಿಯ ಖರೀದಿ ಮಾತುಕತೆ ನನ್ನ ಮತ್ತು ಶಿವಣ್ಣರವರ ಮಧ್ಯೆ ಆಗಿರುತ್ತದೆ. ದಾವಾ ಆಸ್ತಿಯ ಖರೀದಿ ಮಾತುಕತೆ ನಡೆಯುವಾಗ ಅಪ್ಪಾಜೀಗೌಡ ಬಿನ್ ಸೋಸಿಗೌಡ, ನಿಖಿಲ್ ಬಿನ್ ಶಶಿಧರ್ ಹಾಗೂ ಇನ್ನಿತರ ಹಲವಾರು ಜನರು ಹಾಜರಿದ್ದರು. ನಿಪಿ.1 ರ ಕ್ರಯದ ಮೊತ್ತವನ್ನು ನಾನು ಶಿವಣ್ಣರವರಿಗೆ ಚೆಕ್ಕು ಮತ್ತು ನಗದಿನ ರೂಪದಲ್ಲಿ ಕೊಟ್ಟಿರುತ್ತೇನೆ.

8. ನನ್ನ ಹೆಂಡತಿಯ ಹೆಸರು ಸರಸಮ್ಮ ಎಂದರೆ ಸರಿ. 2015 ರಿಂದ 2020 ರ ವರೆಗೆ ನಾನು ಗ್ರಾಮ ಪಂಚಾಯಿತಿ ಉಪಧ್ಯಾಕ್ಷನಾಗಿದ್ದು, ನನ್ನ ಹೆಂಡತಿ ಸದರಿ ಅವಧಿಯಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿದ್ದರು ಎಂದರೆ ಸರಿ. ಸದರಿ ಅವಧಿಯಲ್ಲಿ ಪ್ರತಿವಾದಿ ಮತ್ತು ಪ್ರತಿವಾದಿಯ ತಮ್ಮನಾದ ಮೋಹನ್ ರವರ ಹೆಂಡತಿಯು ಸಹ ಗ್ರಾಮ ಪಂಚಾಯಿತಿಯ ಸದಸ್ಯರಾಗಿದ್ದರು ಎಂದರೆ ಸರಿ. ಪ್ರತಿವಾದಿ ಮತ್ತು ಪ್ರತಿವಾದಿಯ ತಮ್ಮನಾದ ಮೋಹನ್ ರವರ ಹೆಂಡತಿ ಗ್ರಾಮ ಪಂಚಾಯಿತಿಯ ಸದಸ್ಯರಾಗಿದ್ದ ಕಾರಣ ಅವರು ಅವಿಶ್ವಾಸ ಮಂಡನೆ ಮಾಡಿ ನನ್ನ ಹೆಂಡತಿಯನ್ನು ಗ್ರಾಮ ಪಂಚಾಯಿತಿ ಅಧ್ಯಕ್ಷ

ಸ್ವಾಧನದಿಂದ ಕೆಳಗೆ ಇರಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದ್ವೇಷದಿಂದ ನಾನು ಶಿವಣ್ಣರವರಿಂದ ಮೋಸದಿಂದ ನಿಪಿ.1 ರ ಕ್ರಯ ಪತ್ರವನ್ನು ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

9. ಪ್ರತಿವಾದಿಯ ಹೆಂಡತಿಯಾದ ಶೈಲಜಾರವರು ನನ್ನ ವಿರುದ್ಧ ಕೆ ಆರ್ ನಗರದ ಮಾನ್ಯ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಅಸಲು ದಾವೆ ಸಂಖ್ಯೆ 38/2018 ಹಾಗೂ 39/2018 ರ ದಾವೆಗಳನ್ನು ಹೂಡಿರುತ್ತಾರೆ ಎಂದರೆ ಸರಿ. ಸದರಿ ಎರಡು ದಾವೆಗಳಲ್ಲಿಯು ಸಹ ನಾನು ನನ್ನ ಪರ ವಕೀಲರನ್ನು ನೇಮಿಸಿಕೊಂಡಿರುತ್ತೇನೆ ಎಂದರೆ ಸರಿ. ಶೈಲಜಾರವರು ನನ್ನ ವಿರುದ್ಧ ಮೇಲೆ ಹೇಳಿದ ಎರಡು ದಾವೆಗಳನ್ನು ಹೂಡಿದ ನಂತರದಲ್ಲಿ ನಾನು ಈ ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ.

10. ನನಗೆ ದಿನಾಂಕ ನೆನಪಿಲ್ಲ ಆದರೆ 2021 ರಲ್ಲಿ ಪ್ರತಿವಾದಿಯು ದಾವಾ ಆಸ್ತಿಗೆ ಬಂದು ನನಗೆ ತೊಂದರೆ ಕೊಟ್ಟಿರುತ್ತಾರೆ. ಪ್ರತಿವಾದಿಯು ದಾವಾ ಆಸ್ತಿಗೆ ಬಂದು ನನಗೆ ತೊಂದರೆ ಕೊಟ್ಟಿರುತ್ತಾರೆ ಎಂದು ಹೇಳಿ ನಾನು ಪೋಲಿಸ್ ಠಾಣೆಗೆ ದೂರನ್ನು ನೀಡಿರುತ್ತೇನೆ. ನಾನು ಪ್ರತಿವಾದಿಯ ವಿರುದ್ಧ ಪೋಲಿಸ್ ಠಾಣೆಗೆ ದೂರು ನೀಡಿರುತ್ತೇನೆ ಎಂದು ತೋರಿಸಲು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಪ್ರತಿವಾದಿಯ ವಿರುದ್ಧ ಪೋಲಿಸ್ ಠಾಣೆಗೆ ದೂರು ನೀಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹಿಂದಿನಿಂದ ಇಂದಿನವರೆಗೂ ಪ್ರತಿವಾದಿಯೇ ದಾವಾ ಆಸ್ತಿಯ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯ ಹೆಂಡತಿಯಾದ ಶೈಲಜಾರವರು ನನ್ನ ವಿರುದ್ಧ ಮೇಲೆ ಹೇಳಿದ ಎರಡು ದಾವೆಗಳನ್ನು ಹೂಡಿದರ ದ್ವೇಷ ಸಾಧಿಸುವ ಉದ್ದೇಶದಿಂದ ನಾನು ಪ್ರತಿವಾದಿಯ ವಿರುದ್ಧ ಈ ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.1 ರ ಕ್ರಯ ಪತ್ರವು ನಾನು ಸೃಷ್ಟಿಸಿದ ಕ್ರಯ ಪತ್ರ ಎಂದರೆ ಸರಿಯಲ್ಲ.

**ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**